**ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | **2407** |
| ಉತ್ತರಿಸುವ ದಿನಾಂಕ: | **27.03.2026** |
| ಉತ್ತರಿಸಬೇಕಾದವರು: | **ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು** |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಇತ್ತೀಚೆಗೆ ನಡೆಸಿದ ಆರ್ಥಿಕ/ಸಾಮಾಜಿಕ ಸಮೀಕ್ಷೆಗಳ ವಿವರವೇನು(ಸಂಪೂರ್ಣ ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ಇತ್ತೀಚೆಗೆ ನಡೆದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆಯನ್ನು ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಲಾಗಿರುತ್ತದೆ. ಆದಾಗ್ಯೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ರಾಷ್ಟ್ರೀಯ ಮಾದರಿ ಸಮೀಕ್ಷೆಯಲ್ಲಿ ಈ ಕೆಳಕಂಡ ವಿಷಯಗಳ ಕುರಿತಂತೆ ಸಮೀಕ್ಷೆಯನ್ನು ಕೈಗೊಳ್ಳುತ್ತಿದೆ:<br>i) ಗೃಹ ಸಾಮಾಜಿಕ ಬಳಕೆ: ಆರೋಗ್ಯ (Household Social Consumption: Health).<br>ii) ದೇಶೀಯ ಪ್ರವಾಸೋದ್ಯಮ ವೆಚ್ಚ ಸಮೀಕ್ಷೆ (Domestic Tourism Expenditure Survey).<br>iii) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಪ್ರತೀ ವರ್ಷ ತಯಾರಿಕಾ ವಲಯದ ಮೌಲ್ಯವನ್ನು ಕಂಡುಹಿಡಿಯುವ ಸಲುವಾಗಿ ಕೈಗಾರಿಕಾ ವಾರ್ಷಿಕ ಸಮೀಕ್ಷೆ (Annual Survey of Industry) ಯನ್ನು ನಡೆಸಲಾಗುತ್ತಿದೆ. |
| ಆ | ರಾಜ್ಯವು ಅಂಕಿ-ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ(Ministry of Statistics and Programme Implementation) ಜೊತೆ ಸಂಯೋಜನೆ ಮಾಡಿಕೊಂಡು ಯಾವ ಯಾವ ಸಮೀಕ್ಷೆಗಳು ನಡೆಸುತ್ತಿದೆ. | ರಾಜ್ಯ ಸರ್ಕಾರ ಅಂಕಿ-ಅಂಶ ಮತ್ತು ಕೇಂದ್ರ ಸರ್ಕಾರದ ಅಂಕಿ-ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ(Ministry of Statistics and Programme Implementation) ಸಂಯೋಜನೆ ಮಾಡಿಕೊಂಡು ಪ್ರತಿ ವರ್ಷ ನಿಯತಕಾಲಿಕವಾಗಿ ರಾಷ್ಟ್ರೀಯ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುತ್ತಿದೆ; 2025 ನೇ ಸಾಲಿನಲ್ಲಿ ಈ ಕೆಳಕಂಡ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ.<br>i) ಗೃಹ ಸಾಮಾಜಿಕ ಬಳಕೆ: ಆರೋಗ್ಯ (Household Social Consumption: Health).<br>ii) ದೇಶೀಯ ಪ್ರವಾಸೋದ್ಯಮ ವೆಚ್ಚ ಸಮೀಕ್ಷೆ (Domestic Tourism Expenditure Survey).<br>iii) ಕೈಗಾರಿಕಾ ವಾರ್ಷಿಕ ಸಮೀಕ್ಷೆ (Annual Survey of Industry) ಯ ಮಾಹಿತಿಯನ್ನು ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ರವರ ಮಾರ್ಗದರ್ಶನದಲ್ಲಿ ಹಾಗೂ ಅವರು ಆಯ್ಕೆ ಮಾಡಿರುವ ಕೈಗಾರಿಕಾ ಘಟಕಗಳಿಂದ ಉತ್ಪಾದನಾ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.<br>iv) 8ನೇ ಆರ್ಥಿಕ ಗಣತಿಯನ್ನು ಪ್ರಾರಂಭಿಸುವ ಸಲುವಾಗಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಮಿತಿಯನ್ನು ರಚಿಸಲಾಗಿದ್ದು, ಸಚಿವಾಲಯವು 8ನೇ ಆರ್ಥಿಕ ಗಣತಿಯನ್ನು ಪ್ರಾರಂಭಿಸುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಿದ ನಂತರದಲ್ಲಿ ಗಣತಿ ಕಾರ್ಯವನ್ನು ಪ್ರಾರಂಭಿಸಲಾಗುವುದು. |
| ಇ | ಡಿಜಿಟಲ್ ಡಾಟಾ ಸಂಗ್ರಹಣೆಗಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿವೆ: | i) ಆರೋಗ್ಯ (Household Social Consumption: Health). ದೇಶೀಯ ಪ್ರವಾಸೋದ್ಯಮ ವೆಚ್ಚ ಸಮೀಕ್ಷೆಗಳನ್ನು (Domestic Tourism Expenditure Survey). TABLET/PC CAPI(Computer-Assisted Personal Interviewing) ತಂತ್ರಾಂಶದ ಮುಖೇನ ಕೈಗೊಳ್ಳಲು ಕ್ರಮ ವಹಿಸಿದೆ. ಇದರಿಂದ ಸಮೀಕ್ಷೆಯು ಸಂಪೂರ್ಣವಾಗಿ ಡಿಜಿಟಲೀಕರಣಗೊಂಡಿರುತ್ತದೆ. ಸದರಿ ಸಮೀಕ್ಷೆಗಳಲ್ಲಿ |

| | | |
|---|---|---|
| | | ಸಂಗ್ರಹಿಸಿರುವ ಡಾಟಾವು ಭಾರತ ಸರ್ಕಾರದ Server ನಲ್ಲಿ ಸಂಗ್ರಹಣೆ (Store) ಆಗುತ್ತದೆ.<br>ii) ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ಮಾಹಿತಿಯನ್ನು ನಮೂನೆಗಳಲ್ಲಿ ಸಂಗ್ರಹಿಸಿ ಕೇಂದ್ರ ಸರ್ಕಾರ ನೀಡಿರುವ E-schedule ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದೆ.<br>iii) ಬೆಳೆ ಕಟಾವು ಪ್ರಯೋಗಗಳನ್ನು Mobile App ಮೂಲಕ ಕೈಗೊಳ್ಳಲಾಗುತ್ತಿರುವುದರಿಂದ, Digital Data ಸಂಗ್ರಹಣೆಯಾಗುತ್ತಿದೆ.<br>iv) ಇ-ಜನ್ಮ ತಂತ್ರಾಂಶದಲ್ಲಿ ಜನನ ಮತ್ತು ಮರಣಗಳ ನೋಂದಣಿಯನ್ನು ಮಾಡಲಾಗುತ್ತಿದೆ. |
| ಈ | ಅಂಕಿ-ಅಂಶಗಳ ನಿಖರತೆ ಮತ್ತು ಪಾರದರ್ಶಕತೆ ಹೆಚ್ಚಿಸಲು ಕೈಗೊಂಡ ಕ್ರಮಗಳೇನು? | i) ಅಂಕಿ-ಅಂಶಗಳ ನಿಖರತೆಗೆ, ಸಮೀಕ್ಷೆಯ CAPI Application ನಲ್ಲಿ Validation, Hard check errors ಮತ್ತು warnings ಗಳನ್ನು ಅಳವಡಿಸಲಾಗಿದೆ. ಇದರಿಂದ, ಕ್ಷೇತ್ರ ಕಾರ್ಯಕರ್ತರು ಸಮೀಕ್ಷೆಯನ್ನು ಮಾಡುವಾಗ ತಪ್ಪು ಡೇಟಾವನ್ನು Entry ಮಾಡಿದಲ್ಲಿ Validation Error, Hard check errors ಮತ್ತು warnings ಗಳು Pop-up ವಾಗಿ ಡೇಟಾವನ್ನು ಸರಿಯಾಗಿ Entry ಮಾಡಬೇಕೆಂದು ಸೂಚಿಸುತ್ತದೆ.<br>ii) CAPI ತಂತ್ರಾಂಶದ ಮೂಲಕ ನಿಖರತೆ ಕುರಿತಂತೆ ಮೇಲ್ವಿಚಾರಕರು ಸಂಗ್ರಹಿಸಿದ ವಿವರಗಳನ್ನು CAPI ತಂತ್ರಾಂಶದಲ್ಲಿಯೇ ಸರಿಪಡಿಸಲು ಅವಕಾಶ ಕಲ್ಪಿಸಲಾಗಿದೆ.<br>iii) ಕ್ಷೇತ್ರ ಕಾರ್ಯಕರ್ತರಿಗೆ ಮತ್ತು ಮೇಲ್ವಿಚಾರಕರಿಗೆ ಸಮೀಕ್ಷೆ ಮತ್ತು CAPI Applicationರ ಸಂಬಂಧ ತರಬೇತಿಗಳನ್ನು ನೀಡಲಾಗುತ್ತಿದೆ.<br>iv) ಕೈಗಾರಿಕಾ ವಾರ್ಷಿಕ ಸಮೀಕ್ಷೆಯಲ್ಲಿ ಮಾಹಿತಿ ಸಂಗ್ರಹಣಾಕಾರರಿಗೆ ತರಬೇತಿ ಹಾಗೂ ಸಮೀಕ್ಷೆಯ ಸಮಯದಲ್ಲಿ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಮೇಲ್ವಿಚಾರಣೆ ನಡೆಸುವ ಮೂಲಕ ಮಾಹಿತಿ ನಿಖರತೆ ಹಾಗೂ ಪಾರದರ್ಶಕತೆಯನ್ನು ಹೆಚ್ಚಿಸಲು ಕ್ರಮವಹಿಸಲಾಗುತ್ತಿದೆ.<br>v) ಅಂಕಿ ಅಂಶಗಳ ನಿಖರತೆ ಮತ್ತು ಪಾರದರ್ಶಕತೆ ಹೆಚ್ಚಿಸುವ ನಿಟ್ಟಿನಲ್ಲಿ ಬೆಳೆ ಕಟಾವು ಪ್ರಯೋಗಗಳ ಮೇಲ್ವಿಚಾರಣೆಯನ್ನು ನಿಯಮಾನುಸಾರ ನಡೆಸಲಾಗುತ್ತಿದೆ. ಇದರಿಂದ ಅಂಕಿ-ಅಂಶಗಳ ನಿಖರತೆ ಹಾಗೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗುತ್ತಿದೆ.<br>vi) ಕೃಷಿ ಅಂಕಿ ಅಂಶಗಳ ವಿಭಾಗಕ್ಕೆ ಸಂಬಂಧಿಸಿದಂತೆ, ಅಂಕಿ ಅಂಶಗಳ ನಿಖರತೆಗಾಗಿ ಬಹು ಹಂತಗಳಲ್ಲಿ ಮೇಲ್ವಿಚಾರಣೆ ಕೈಗೊಳ್ಳುತ್ತಿರುವುದರಿಂದ ಅಂಕಿ ಅಂಶಗಳು ನಿಖರವಾಗಿರುತ್ತವೆ.<br>vii) ಕೃಷಿ ಅಂಕಿ ಅಂಶಗಳ ವಿಭಾಗದ ವರದಿಗಳನ್ನು ಸಾರ್ವಜನಿಕರ ಲಭ್ಯತೆಗಾಗಿ ನಿರ್ದೇಶನಾಲಯದ ವೆಬ್‌ಸೈಟ್ ನಲ್ಲಿ ಬಿಡುಗಡೆಗೊಳಿಸುತ್ತಿದ್ದು, ಪಾರದರ್ಶಕತೆಯನ್ನು ಕಾಯ್ದುಕೊಳ್ಳಲಾಗಿದೆ. |

**ಪಿ ಡಿ ಎಸ್ 50 ಎಸ್ ಎಸ್ ಎಮ್ 2026**

**(ಡಿ.ಸುಧಾಕರ್)**
**ಯೋಜನೆ , ಕಾರ್ಯಕ್ರಮ ಸಂಯೋಜನೆ,**
**ಮತ್ತು ಸಾಂಖ್ಯಿಕ ಸಚಿವರು**